MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 6-12-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತದ ನವೆಂಬರ್ ಪಾಮೆಣ್ಣೆ ಆಮದು 29 ಶೇಕಡಾ ಹೆಚ್ಚಳ

2022 ನವೆಂಬರ್ ತಿಂಗಳಲ್ಲಿ ಭಾರತದ ಪಾಮೆಣ್ಣೆ ಆಮದು ಹಿಂದಿನ ತಿಂಗಳಿಗಿಂತ 29 ಶೇಕಡಾ ಹೆಚ್ಚಳದೊಂದಿಗೆ 1.14 ಮಿಲಿಯನ್ ಟನ್‌ಗಳಿಗೇರಿದೆಯೆನ್ನಲಾಗಿದೆ. ಪರ್ಯಾಯ ಖಾದ್ಯತೈಲಗಳಿಗೆ ಹೋಲಿಸಿದಾಗ ದರ ಬಹಳ ಕಡಿಮೆಯಿರುವುದರಿಂದ ಆಮದು ಹೆಚ್ಚಳಗೊಂಡಿದೆಯೆನ್ನಲಾಗಿದೆ. ಹಿಂದಿನ ವರ್ಷ ನವೆಂಬರ್‌ನಲ್ಲಿ 539,639 ಟನ್ ಪಾಮೆಣ್ಣೆ ಆಮದಾಗಿತ್ತೆನ್ನಲಾಗಿದೆ. ಈ ತಿಂಗಳಲ್ಲು ಪಾಮೆಣ್ಣೆ ಆಮದು 1 ಲಕ್ಷ ಟನ್ ದಾಟಬಹುದೆನ್ನಲಾಗಿದ್ದು, ಸೋಯಾ ಹಾಗೂ ಸೂರ್ಯಕಾಂತಿ ಎಣ್ಣೆಗಳಿಗೂ ಪಾಮೆಣ್ಣೆ ಇರುವ ದರ ವ್ಯತ್ಯಾಸ ಇಳಿಕೆಯಾಗುತ್ತಿದ್ದು, ದರ ವ್ಯತ್ಯಾಸ ಕನಿಷ್ಠ ಗೊಂಡಂತೆ ಪಾಮೆಣ್ಣೆ ಆಮದು ಇಳಿಕೆಯಾಗಬಹುದೆನ್ನಲಾಗಿದೆ. ನವೆಂಬರ್ ತಿಂಗಳಲ್ಲಿ ಸೋಯಾ ಎಣ್ಣೆ ಆಮದು 36 ಶೇಕಡಾ ಇಳಿಕೆಯೊಂದಿಗೆ 215,000 ಟನ್‌ಗಳಾಗಿದೆಯೆನ್ನಲಾಗಿದೆ. ಸೂರ್ಯಕಾಂತಿ ಎಣ್ಣೆ ಆಮದು 10 ಶೇಕಡಾ ಹೆಚ್ಚಳದೊಂದಿಗೆ 160,000 ಟನ್‌ಗಳಾಗಿದೆಯೆನ್ನಲಾಗಿದೆ. ಮಲೇಶೀಯನ್ ಪಾಮೆಣ್ಣೆ ದರ 1.56 ಶೇಕಡಾ ಇಳಿಕೆಯೊಂದಿಗೆ 3905 ರಿಂಗಿಟ್ಸ್ ($ 892.57) ಕ್ಕೆ (ಟನ್‌ಗೆ) ಇಳಿಕೆಯಾಗಿದೆ.

## ಈ ವರ್ಷ ಕಚ್ಚಾ ಗೋಡಂಬಿ ಫಸಲು ಬೇಗನೆ ಪ್ರಾರಂಭದ ನಿರೀಕ್ಷೆ

ಈ ವರ್ಷ ಗೋಡಂಬಿ(ಗೇರು ಮರ) ಮರಗಳು ಡಿಸೆಂಬರ್ ತಿಂಗಳಾರಂಭದಲ್ಲೇ ಹೂ ಬಿಡಲಾರಂಭಿಸಿದ್ದು, ಗಿಡಗಳಲ್ಲಿ ಹೂ ಗೊಂಚಲು ಕಾಣಲಾರಂಭವಾಗಿದೆ. ಫಸಲು ಬೇಗನೆ ಪ್ರಾರಂಭದ ನಿರೀಕ್ಷೆಯಿದೆ. ಹವಾಮಾನ ಪೂರಕವಾಗಿದ್ದು ಉತ್ತಮ ಫಸಲಿನ ನಿರೀಕ್ಷೆಯಿದೆ. ಆಮದು ಗೋಡಂಬಿಗಿಂತ ದೇಶೀ ಗುಣಮಟ್ಟದ ಗೋಡಂಬಿ ತಿರುಳು ಲಭ್ಯವಾಗುತ್ತಿದೆ. ಉತ್ತಮ ಗುಣಮಟ್ಟದ ಗೋಡಂಬಿ ತಿರುಳಿಗೆ ಉತ್ತಮ ಬೇಡಿಕೆಯಿದ್ದು, ಸಾಮಾನ್ಯಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡುವ ಅವಕಾಶವಿದೆ. ಆದರೂ ಈ ವರ್ಷ ಕಚ್ಚಾ ಗೋಡಂಬಿ ಆಮದು ಹೆಚ್ಚಳವಾಗಿದೆಯೆನ್ನಲಾಗಿದೆ.

## ಸಕ್ಕರೆ ಉತ್ಪಾದನೆ ಇಳಿಕೆ ಸಾಧ್ಯತೆ

ದೇಶದ ಸಕ್ಕರೆ ಉತ್ಪಾದನೆ ಈ ವರ್ಷ ಅಂದಾಜಿಗಿಂತ ಶೇಕಡಾ ಇಳಿಕೆಯಾಗಬಹುದೆನ್ನಲಾಗಿದೆ. ಮಹಾರಾಷ್ಟ್ರ ದಲ್ಲಿ ಫಸಲು ಇಳಿಕೆಯಾಗಬಹುದೆನ್ನಲಾಗಿದೆ. ಅಲ್ಲಿನ ಸಕ್ಕರೆ ಉತ್ಪಾದನೆ ಅಂದಾಜಿಸಿದ 13.8 ಮಿಲಿಯನ್ ಟನ್‌ಗಳಿಂದ 11.7 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಬಹುದೆನ್ನಲಾಗಿದೆ. ಇದರಿಂದ ದೇಶದ ಉತ್ಪಾದನೆ ಅಂದಾಜಿಸಿದ 35.8 ಮಿಲಿಯನ್ ಟನ್‌ಗಳಿಂದ 33.3 ಮಿಲಿಯನ್ ಟನ್ ಗಳಿಗೆ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ.

## ಖಾರೀಫ್ ಬೆಳೆಯ ಬೇಳೆಕಾಳು ಉತ್ಪಾದನೆ ಇಳಿಕೆ

ಈ ವರ್ಷದ ಖಾರೀಫ್ ಬೇಳೆಕಾಳು ಬೆಳೆಯಲ್ಲಿ ತೊಗರಿ ಉತ್ಪಾದನೆ 9.8 ಶೇಕಡಾ ಇಳಿಕೆಯಾಗಲಿದೆಯೆನ್ನಲಾಗಿದೆ. ಹಿಂದಿನ ವರ್ಷದ 3.84 ಮಿಲಿಯನ್ ಟನ್ ಬದಲಾಗಿ 3.47 ಮಿಲಿಯನ್ ಟನ್ ಆಗಬಹುದೆನ್ನಲಾಗಿದೆ. ಕರ್ನಾಟಕದಲ್ಲಿ 10ಶೇಕಡಾ ಇಳಿಕೆಯಿಂದ 0.84 ಮಿಲಿಯನ್ ಟನ್ ಮಹಾರಾಷ್ಟ್ರ ದಲ್ಲಿ 23 ಶೇಕಡಾ ಇಳಿಕೆಯಿಂದ 0.90 ಮಿಲಿಯನ್ ಟನ್, ತೆಲಂಗಾಣದಲ್ಲಿ 42 ಶೇಕಡಾ ಇಳಿಕೆಯಿಂದ 0.15 ಮಿಲಿಯನ್ ಟನ್, ಮಧ್ಯಪ್ರದೇಶ ದಲ್ಲಿ 73 ಶೇಕಡಾ ಹೆಚ್ಚಳದಿಂದ 0.46 ಮಿಲಿಯನ್ ಟನ್, ತೊಗರಿ ಉತ್ಪಾದನೆಯಾಗಬಹುದೆನ್ನಲಾಗಿದೆ. ಉದ್ದು ದೇಶೀ ಉತ್ಪಾದನೆ 12 ಶೇಕಡಾ ಇಳಿಕೆಯಾಗಿ ಹಿಂದಿನ ವರ್ಷದ 1.74 ಮಿಲಿಯನ್ ಟನ್ ಗೆ ಬದಲಾಗಿ ಈ ವರ್ಷ 1.53 ಮಿಲಿಯನ್ ಟನ್ ಗಳಾಗಬಹುದೆನ್ನಲಾಗಿದೆ. ಮಹಾರಾಷ್ಟ್ರ ದ ಉದ್ದು ಉತ್ಪಾದನೆಯಲ್ಲಿ 32 ಶೇಕಡಾ ಇಳಿಕೆಯಾಗಿ 0.19 ಮಿಲಿಯನ್ ಟನ್, ಉತ್ತರಪ್ರದೇಶದಲ್ಲಿ 9 ಶೇಕಡಾ ಇಳಿಕೆಯಿಂದ 0.35 ಮಿಲಿಯನ್ ಟನ್, ರಾಜಸ್ಥಾನದಲ್ಲಿ 8 ಶೇಕಡಾ ಇಳಿಕೆಯಿಂದ 0.14 ಮಿಲಿಯನ್ ಟನ್ ಹಾಗೂ ಮಧ್ಯಪ್ರದೇಶದಲ್ಲಿ 5 ಶೇಕಡಾ ಹೆಚ್ಚಳದಿಂದ 0.48 ಮಿಲಿಯನ್ ಟನ್ ಗಳಾಗಬಹುದೆನ್ನಲಾಗಿದೆ. ಇದಲ್ಲದೆ ಆಂಧ್ರ ಪ್ರದೇಶ ಹಾಗೂ ತೆಲಂಗಾಣ ಗಳಲ್ಲಿ ಉದ್ದು ಉತ್ಪಾದನೆಯಾಗಲಿದೆ. ಹೆಸರುಕಾಳು ಉತ್ಪಾದನೆ ಹಿಂದಿನ ವರ್ಷಕ್ಕೆ 3 ಶೇಕಡಾ ಹೆಚ್ಚಳದಿಂದ ಹಿಂದಿನ ವರ್ಷದ 1.48 ಮಿಲಿಯನ್ ಟನ್ ಬದಲಾಗಿ 1.53 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ರಾಜಸ್ತಾನದಲ್ಲಿ 10ಶೇಕಡಾ ಹೆಚ್ಚಳವಾಗಬಹುದೆನ್ನಲಾಗಿದೆ. ಕರ್ನಾಟಕದಲ್ಲಿ 14 ಶೇಕಡಾ ಇಳಿಕೆಯಿಂದ 0.14 ಮಿಲಿಯನ್ ಟನ್ ಹಾಗೂ ಮಹಾರಾಷ್ಟ್ರ ದಲ್ಲಿ 25 ಶೇಕಡಾ ಇಳಿಕೆಯಿಂದ 0.14 ಮಿಲಿಯನ್ ಟನ್ ಗಳಾಗಬಹುದೆನ್ನಲಾಗಿದೆ.

## ಸಕ್ಕರೆ ದರ ಸ್ವಲ್ಪ ಮಟ್ಟಿಗೆ ಇಳಿಕೆ

ಪ್ರಸ್ತುತ ಸಕ್ಕರೆ ಉತ್ಪಾದನಾ ವರ್ಷದಲ್ಲಿ ನವೆಂಬರ್ 30ರ ತನಕ ಭಾರತದ ಸಕ್ಕರೆ ಉತ್ಪಾದನೆ 47.9 ಲಕ್ಷ ಟನ್‌ಗಳಾಗಿವೆಯೆನ್ನಲಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 47.2 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿತ್ತೆನ್ನಲಾಗಿದೆ. ಮಹಾರಾಷ್ಟ್ರದಲ್ಲಿ ಹಿಂದಿನ ವರ್ಷದ ಉತ್ಪಾದನೆ 20.3 ಲಕ್ಷ ಟನ್‌ಗಳಿಂದ ಈ ಫಸಲು ಪ್ರಥಮ 2 ತಿಂಗಳ ಉತ್ಪಾದನಾ 20 ಲಕ್ಷ ಟನ್‌ಗಳಿಗೆ ಇಳಿಕೆ, ಉತ್ತರಪ್ರದೇಶದಲ್ಲಿ 10.4 ಲಕ್ಷ ಟನ್‌ಗಳಿಂದ 11.2 ಲಕ್ಷ ಟನ್‌ಗಳಿಗೆ ಪ್ರಗತಿ ಹಾಗೂ ಕರ್ನಾಟಕದಲ್ಲಿ 12.8 ಲಕ್ಷ ಟನ್‌ಗಳಿಂದ 12.1 ಲಕ್ಷ ಟನ್‌ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ಸಕ್ಕರೆ ದರ ಸ್ವಲ್ಪ ಮಟ್ಟಿಗೆ ಇಳಿಕೆಯಾಗಿದೆ.